ಅಂತಹ ಸುಂದರವಾದ ದೇಹದಲ್ಲಿ ಎದ್ದು ಕಾಣುವುದು ಅಂಟಿಕೊಂಡಂತಿರುವ ಡಾಂಬರು ಬಣ್ಣದ ಕರಿ ಮೂಗು. ಅವನಿಗೆ ಅದು ತನ್ನ ಪೂರ್ವಿಕರ ವಂಶವಾಹಿನಿಯ ತಂತು ತಂತುಗಳಲ್ಲಿ ಹರಿದು ಬಂದು ಮ್ಯೂಟೇಷನ್ನಾಗಿ ಸಹಜವಾಗಿ ಅವನ ದೇಹದಲ್ಲಿ ರೂಪುಗೊಂಡಿದ್ದರೂ, ಆರ್ಟಿಫಿಷಿಯಲ್ ಆಗಿ, ಯಾರೋ ಹೊರಗಡೆಯಿಂದ ಅಂಟಿಸಿರುವಂತೆಯೇ ಕಾಣುತ್ತದೆ. ಅವನಿಗಂತೂ ಇದನ್ನು ನೋಡಿಕೊಂಡಾಗಲೆಲ್ಲ ತೀವ್ರವಾಗಿ ಕಾಡುತ್ತದೆ ಕರಿಮೂಗು. ಯಾವ ಜೀನು ಹಾದು ಬಂದು ತನ್ನಲ್ಲಿ ಸೇರಿಕೊಂಡಿದೆ ಹಾಳಾದ್ದು, ತನ್ನ ಪೂರ್ವಿಕರಿಗ್ಯಾರಿಗೋ ಒಬ್ಬರಲ್ಲೇ ನಿಂತು ಬಿಡಬಾರದಿತ್ತೆ ಎಂದು ವಂಶವಾಹಿನಿಯ ಪಯಣವನ್ನು ನೆನೆದು ಶಪಿಸುವನು. ಜೀನ್ಸಿನ ವಿಚಿತ್ರ ಸ್ವಭಾವವನ್ನು ಕಂಡು ತನಗೆ ಗೊತ್ತಿದ್ದ ಎಲ್ಲ ಬೈಗುಳದ ಪದಗಳನ್ನು ಉಪಯೋಗಿಸಿ ನಿಂದಿಸುವನು ಮತ್ತು ಯಾವ ಕಾರಣಕ್ಕಾಗಿ ತನಗೆ ಈ ಮೂಗು ತಗುಲಿ ಹಾಕಿಕೊಂಡಿದೆ ಎಂದು ಕೊರಗುವನು. ಆದರೆ, ಅದು, ಸಹಜವಾಗಿ ತಾನು ಮಾಡಬಹುದಾದ ಎಲ್ಲ ಕೆಲಸ ಕಾರ್ಯಗಳನ್ನು ಚಾಚೂ ತಪ್ಪದೆ ಮಾಡಿಕೊಂಡು ಬಂದಿದೆ, ಮಾಡುತ್ತಿದೆ. ಪ್ರತಿದಿನ ತಾನು ಹೊರಗಡೆ ಹೋಗುವ ಮುನ್ನ, ಅವನು ಕನ್ನಡಿಯ ಮುಂದೆ ಒಂದು ಗಂಟೆಯಾದರೂ ನಿಂತುಕೊಂಡು ಅದನ್ನೇ ನೋಡಿಕೊಳ್ಳುತ್ತಾನೆ. ಅನೇಕ ಸಲ ಕನ್ನಡಿಯ ಮುಂದೆ ನಿಂತುಕೊಂಡಾಗ ಅವನಿಗೆ ಅವನ ಮೂಗು ಒಂದು ತೈಲ ಅಥವಾ ಜಲವರ್ಣ ಚಿತ್ರದಲ್ಲಿನ ಒಂದು ಆಬ್ಜೆಕ್ಟಾಗಿ ಕಂಡು ಬರುತ್ತದೆ. ಪಕ್ಕದಲ್ಲಿ ಕುಳಿತುಕೊಂಡಿರವವನ ಮೂಗು ಅವನ ಗೋಧಿ ಮೈ ಬಣ್ಣದ ಜೊತೆ ಬೆರೆತು ಹೋಗಿದ್ದು ದೇಹದ ಎಲ್ಲ ಅಂಗಗಳು ಸಹಜವಾಗಿ ಇರುವಂತೆ ಇದೆ. ಅದನ್ನೂ ಅವನು ನೋಡುವನು. ಮಳೆಯ ಲಯ ಒಂದೇ ಬಗೆಯಲ್ಲಿ ಇದ್ದು ಹಿಕ್ಕೆಯ ಬಿಳಿಯ ಬಣ್ಣವೆಲ್ಲ ಅಳಿಸಿ ಕಪ್ಪು ಪ್ರತಿಮೆಯ ವ್ಯಕ್ತಿ ಮಳೆಯಲ್ಲಿ ಒದ್ದೆ. ಮಳೆಯ ಜಲ ಮೆಲ್ಲನೆ ಇಳಿಯುತ್ತಿದೆ.

ಖಾಸಗಿ ಕಾಲೇಜೊಂದರಲ್ಲಿ ಗುಮಾಸ್ತನಾಗಿ ಕಾರ್ಯನಿರ್ವಹಿಸುತ್ತಿರುವ ಅವನು ಪ್ರತಿ ವರ್ಷದ ಪ್ರವೇಶಾತಿ ಸಂದರ್ಭದಲ್ಲಿ ಕಾಲೇಜಿಗೆ ಸೇರಲು ಬರುವ ಹುಡುಗ, ಹುಡುಗಿಯರ ಮೂಗುಗಳನ್ನೇ ನೋಡುತ್ತ, ಅವರ ಮೂಗುಗಳ ಜೊತೆ ತನ್ನದನ್ನು ಹೋಲಿಕೆ ಮಾಡಿಕೊಂಡು ತನಗೆ ತಾನೇ ನಿಂದಿಸಿಕೊಳ್ಳುವನು. ಒಮ್ಮೊಮ್ಮೆ ಅವನ ಮೂಗು ಅವನಿಗೆ ಸಾಪ್ತಾಹಿಕದಲ್ಲಿ ಪ್ರಕಟಗೊಂಡ ಕಥೆಗೆ ಮಾಡಲಾಗಿರುವ ಆರ್ಟ್ ವರ್ಕ್ ತರ ಕಾಣುತ್ತದೆ. ಜೊತೆಗೆ ಅವುಗಳಿಗೆ ಬಿಡಿಸಲಾದ ಕಥೆಗಳನ್ನು ತಾನೇ ಊಹಿಸಿಕೊಂಡು ಕಥೆಯ ಯಾವ ಸನ್ನಿವೇಶ ಅಥವಾ ಸಂದರ್ಭದಲ್ಲಿ ಆ ತರದ ಮೂಗಿನ ಪ್ರಸಂಗ ಬರುತ್ತದೆ ಎಂದು ತನಗೆ ತಾನೆ ಅದರ ಬಗ್ಗೆ ಚರ್ಚಿಸಿಕೊಳ್ಳುತ್ತಾನೆ. ಕಥೆಯನ್ನು ಊಹಸಿಕೊಂಡು ಅದಕ್ಕೆ ಬಿಡಿಸಲಾಗಿರುವ ಮೂಗಿನ ಚಿತ್ರವನ್ನು ನೆನೆದು ಕಲಾವಿದನ ಅಥವಾ ಕಲಾವಿದಳ ಬಗ್ಗೆ ಹೆಮ್ಮೆಯ ಭಾವನೆಯನ್ನು ವ್ಯಕ್ತಪಡಿಸಿದ್ದಾನೆ ಎಂತಹ ಅದ್ಭುತವಾದ ಕಲೆ ಎಂದು. ನಿಜಕ್ಕು, ಕಥೆಗೆ ಮಾಡಿರುವ ಆರ್ಟ್ ಕಥೆಯನ್ನು ಮತ್ತೊಂದು ಮಜಲಿಗೆ ಎತ್ತಿಕೊಂಡು ಹೋಗಿದೆ ಎಂದು ತನಗೆ ತಾನೇ ಅಂದುಕೊಳ್ಳುವನು. ಆರ್ಟಿಸ್ಟ್‌ಗೆ ಒಂದು ಹ್ಯಾಟ್ಸ್ ಆಫ್ ಎಂದು ಕನ್ನಡಿಯಲ್ಲಿನ ತನ್ನ ಪ್ರತಿರೂಪದ ಮುಂದೆ ತನ್ನ ಅಂಗೈಯನ್ನು ಹಣೆಗೆ ಒತ್ತೊಕೊಳ್ಳುವನು. ಒಮ್ಮೆ ತಾನು ಊಹಿಸಿಕೊಂಡ ಕಥೆಯಲ್ಲಿ ಅಂತಹ ವಿಚಿತ್ರ ಮೂಗಿನ ಯಾವ ಸಂದರ್ಭ ಅಥವಾ ಪ್ರಸಂಗವೂ ಬರದೇ ಇದ್ದಾಗ ಸೋಜಿಗ ಪಟ್ಟಿದ್ದಾನೆ. ಅದು ಹೇಗೆ ಕಲಾವಿದ ಕಥೆಯಲ್ಲಿ ಇಲ್ಲದ್ದನ್ನು, ತನ್ನ ಕಲೆಯಲ್ಲಿ ತಂದಿದ್ದಾನೆ ಎಂದು ತನ್ನೊಳಗೆ ತಾನೇ ತಕರಾರು ಮಾಡಿಕೊಳ್ಳುವನು. ಆಗೆಲ್ಲ ತನ್ನ ಬದುಕೇ ಒಂದು ಕಥೆ. ತನ್ನ ಮೂಗು ಅದಕ್ಕೆ ಬಿಡಿಸಲಾಗಿರುವ ಒಂದು ಚಿತ್ರ ಎಂದುಕೊಳ್ಳುವನು. ಊಹಿಸಿಕೊಂಡ ಕಥೆಯನ್ನು ಎರಡು ಮೂರು ಸಲ ಮನಸ್ಸಿನಲ್ಲಿಯೇ ಮತ್ತೆ ಮತ್ತೆ ಓದಿಕೊಂಡಿದ್ದಾನೆ ಕಥೆಯ ಯಾವುದಾದರೂ ಮೂಲೆಯಲ್ಲಿ ಆ ತರದ ಒಂದು ಸಂಗತಿ ಇದ್ದು ಅದು ತನ್ನ ಕಣ್ಣನ್ನು ತಪ್ಪಿಸಿಕೊಂಡು ಹೋಗಿದೆಯಾ ಎನ್ನುವುದನ್ನು ಖಾತ್ರಿಮಾಡಿಕೊಳ್ಳಲು.

ಅವನು ಇತ್ತೀಚಿಗೆ ತನ್ನ ಮೂಗನ್ನು ಕಾಣಲು ಊಹಿಸಿಕೊಂಡ ಕಥೆ ಈ ರೀತಿ ಇದೆ: ಗುಲಾಬಿ ತೋಟ, ದಟ್ಟ ಕೆಂಪು, ದಟ್ಟವಾಗಿ ಹಬ್ಬಿಕೊಂಡಿದೆ. 'ನಿನ್ನಂಥ ಎಬಡನನ್ನು ಹೂ ಕೊಯ್ಯಲು ಕರೆದುಕೊಂಡು ಬಂದೆ ನೋಡು, ನನಗೆ ಬುದ್ಧಿ ಇಲ್ಲ' ಎಂದಳು ಕಥಾನಾಯಕಿ. 'ಅಡಿಕೆ ಮರವನ್ನು ಹತ್ತಲು ಬಿಟ್ಟು ನೋಡು ಅಮ್ಮಣ್ಣೀ, ಅಳಿಲಿಗಿಂತ ಫಾಸ್ಟಾಗಿ ಹತ್ತಿ ಗೊಂಚಲು ಇಳಿಸ್ತೀನಿ. ಈ